# ಒಂದು

# ಸಂಶೋಧನಾ ಪ್ರಬಂಧ

# “ಸುಧಾಮೂರ್ತಿಯವರ ಬದುಕು ಮತ್ತು ಬರಹಗಳ ಕುರಿತು ಸಾಹಿತ್ಯಿಕ ಅಧ್ಯಯನ”

*ಶ್ರೀದೇವಿ ನಾಗಮೂರ್ತಿ.ಮದನಕರ್*

**ಸಂಶೋಧಕರು,**
**ಕನ್ನಡ ಪಿಜಿ ಅಧ್ಯಯನ ಮತ್ತು ಸಂಶೋಧನಾ ವಿಭಾಗ,**
**ಗುಲ್ಬರ್ಗ ವಿಶ್ವವಿದ್ಯಾಲಯದಲ್ಲಿ ಗುಲ್ಬರ್ಗಾ**
**ಕರ್ನಾಟಕ - ರಾಜ್ಯ**

## 1. ಪ್ರಸ್ತಾವನೆ:

ಮನುಷ್ಯ ಸಮಾಜ ಜೀವಿ. ಈ ಸಮಮನುಷ್ಯ ಸಮಾಜ ಜೀವಿ. ಈ ಸಮಾಜದ ಏಳಿಗೆಗಾಗಿ ಶ್ರಮಿಸಿದ ಅನೇಕ ಮಹಾನ್ ವ್ಯಕ್ತಿಗಳು ತಮ್ಮ ವೈಯಕ್ತಿಕ ಬದುಕಿಗೆ ಅಷ್ಟೊಂದು ಮಹತ್ವ ನೀಡದೆ ಸಾಮಾಜಿಕ ಏಳಿಗೆಗಾಗಿ ಶ್ರಮಿಸಿದ್ದಾರೆ. ಉದಾ: ಬುದ್ಧ, ಬಸವಣ್ಣ, ಅಂಬೇಡ್ಕರ್‌ರು, ಜ್ಯೋತಿಬಾಫುಲೆ, ಗಾಂಧಿಜೀ ಮುಂತಾದವರ ತ್ಯಾಗ, ಹೋರಾಟದ ಪ್ರತೀಕ ನಮ್ಮ ಈ ಸುಂದರ ಬದುಕು. ಇವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ನಡೆಯುವ ವಿರಳರಲ್ಲಿ ಸುಧಾಮೂರ್ತಿಯವರು ಒಬ್ಬರೆನ್ನಬಹುದು. ಇವರು ತಮ್ಮ ಸರಳ ಜೀವನ ಶೈಲಿಯ ಮೂಲಕ ಸಮಾಜದ ಏಳಿಗೆಗಾಗಿ ಶ್ರಮಿಸುತ್ತ ಪ್ರಸಿದ್ಧರಾಗಿದ್ದಾರೆ. ಇವರ ಜೀವನ ಮತ್ತು ಬರಹಗಳ ಕುರಿತು ಅಧ್ಯಯನ ಕೈಗೊಳ್ಳುವುದು ಮಹತ್ವದ ವಿಚಾರವಾಗಿದೆ.ಸುಧಾಮೂರ್ತಿಯವರು ಸಾಮಾಜಿಕ ಅನೇಕ ಉತ್ತಮಕಾರ್ಯಗಳನ್ನು ಕೈಗೊಳ್ಳುವುದಲ್ಲದೆ ಸಾಹಿತ್ಯಿಕವಾಗಿಯೂ ಅನೇಕ ಕೃತಿಗಳನ್ನು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಬರೆದಿದ್ದಾರೆ. ಇವುಗಳ ಮೂಲಕ ಅವರ ವಿಚಾರಧಾರೆಗಳು ಇಂದಿನ ಪೀಳಿಗೆಗೆ ದಾರಿದೀಪವಾಗಿವೆ. ಆದ್ದರಿಂದ ಸುಧಾಮೂರ್ತಿಯವರ ಕುರಿತು ಅಧ್ಯಯನ ಕೈಗೊಳ್ಳುವುದು ಪ್ರಮುಖ ವಿಚಾರವಾಗಿದೆ. ಇವರ ವಿಶಾಲ ಮನೋಧರ್ಮ, ಸಂಸ್ಕೃತಿ–ಸಂಪ್ರದಾಯ, ತತ್ವಾದರ್ಶಗಳನ್ನು ಅರಿಯುವುದರೊಂದಿಗೆ ಸಾಹಿತ್ಯೀಕವಾಗಿ ಇವರು ಕೈಗೊಂಡ ಕಾರ್ಯವನ್ನು ತಿಳಿಯುವುದು ಮತ್ತು ದೇಶದ ಪ್ರಮುಖ ವ್ಯಕ್ತಿಯಾಗಿದ್ದರು ಅದರ ಮದತಲೆಗೆ ಹಚ್ಚಿಕೊಳ್ಳದೆ ಜನಸಾಮಾನ್ಯರ ಏಳಿಗೆಗೆ ಶ್ರಮಿಸುವ ಇವರ ತತ್ವಾದರ್ಶಗಳು ಪ್ರಮುಖವಾಗಿ ಅಧ್ಯಯನ ಮಾಡುವುದಾಗಿದೆ.

## 2. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಸುಧಾಮೂರ್ತಿಯವರ ಹೆಸರು ಭಾರತೀಯ ಶ್ರೀಮಂತರ ಪಟ್ಟಿಯಲ್ಲಿದ್ದರೂ ಅವರು ತಮ್ಮ ಸರಳ, ಸಜ್ಜನಿಕೆಯ ಮೂಲಕವೇ ಪ್ರಸಿದ್ಧರಾಗಿದ್ದಾರೆ. ಮಹಾನ್ ವ್ಯಕ್ತಿಗಳ ತತ್ವಾದರ್ಶಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ನಡೆಯುತ್ತ ಸಮಾಜಕ್ಕೆ ಮಾದರಿಯ ವ್ಯಕ್ತಿಯಾಗಿದ್ದಾರೆ.

ಸುಧಾಮೂರ್ತಿಯವರು ಭಾರತೀಯ ಶಿಕ್ಷಣತಜ್ಞೆ ಲೇಖಕಿ ಮತ್ತು ಲೋಕೋಪಕಾರಿ, ಅವರು ಇನ್ಫೋಸಿಸ್ ಫೌಂಡೇಶನ್‌ನ ಅಧ್ಯಕ್ಷರಾಗಿದ್ದು, ಇವರು ಇನ್ಫೋಸಿಸ್‌ನ ಸಹ–ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಅವರನ್ನು ವಿವಾಹವಾಗಿದ್ದಾರೆ. ಇವರು ಬಿ.ವಿ.ಬಿ. ವಿಜ್ಞಾನ ಮತ್ತು ತಂತ್ರಜ್ಞಾನ ಕಾಲೇಜ್‌ನಲ್ಲಿ ಇಂಜಿನೀಯರಿಂಗ್ ಪದವಿ ಮತ್ತು ಕಂಪ್ಯೂಟರ್ ಸೈನ್ಸ್‌ನಲ್ಲಿ ಪದವಿ ಪಡೆದುಕೊಂಡಿದ್ದಾರೆ. ಪ್ರಮುಖವಾಗಿ ಇವರು ಸಮಾಜಸೇವಾಕಾರ್ಯದಲ್ಲಿ ಗುರುತಿಸಿಕೊಂಡಿದ್ದಾರೆ. ಇವರು ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯದಲ್ಲಿ ಕೊಡುಗೆ ನೀಡಿದ್ದಾರೆ. ಇವರು ಕನ್ನಡದಲ್ಲಿ ಪ್ರಮುಖವಾಗಿ ಅನೇಕ ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ 1) ಡಾಲರ್ ಸೊಸೆ 2) ಕಾವೇರಿಯಿಂದ ಮೇಕಾಂಗಿಗೆ 3) ಋಣ 4) ಗೊಟ್ಟೊಂದು ಹೇಳುವೆ 5) ಯಶಸ್ವಿ 6) ಪರಿಧಿ 7) ಅಸ್ತಿತ್ವ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ವಿಚಾರಧಾರೆಗಳನ್ನು ಆಳವಾಗಿ ಅಧ್ಯಯನ ಮಾಡುವ ಮೂಲಕ ನಾವು ಮಾಡುವ ಚಿಕ್ಕ ಕೆಲಸವನ್ನು ನಿಷ್ಠೆ, ಪ್ರಾಮಾಣಿಕತೆ, ಸರಳತೆಯಿಂದ ಮಾಡುವ ಮೂಲಕ ನೆಮ್ಮದಿಯನ್ನು, ಯಶಸ್ಸು ಹೊಂದುವ ಮಾರ್ಗವನ್ನು ತಿಳಿಯುವುದಾಗಿದೆ.

## 3. ಅಧ್ಯಯನದ ಅವಶ್ಯಕತೆ:

ಸುಧಾಮೂರ್ತಿಯವರ ಪ್ರಕಾರ ಹಣವು ಯಾವಾಗಲೂ ಕೈ ಬದಲಾಯಿಸುತ್ತದೆ ಮತ್ತು ಸಮಾಜಕ್ಕೆ ಮರಳಿ ನೀಡುವುದರ ಮೂಲಕ ಗಮನಾರ್ಹವಾದ ಸದ್ಭಾವನೆಯನ್ನು ಬೆಳೆಸುತ್ತದೆ ಎಂಬ ಭಾವನೆ ಹೊಂದಿದ್ದಾರೆ. ಅವರ ಉದಾತ್ತ ಚಿಂತನೆಗಳು ಕಲೆ ಮತ್ತು ಸಂಸ್ಕೃತಿ, ಸಾರ್ವಜನಿಕ ನೈರ್ಮಲ್ಯ, ಆರೋಗ್ಯ ರಕ್ಷಣೆ, ಬಡತನ ನಿರ್ಮೂಲನೆ, ಮಹಿಳಾ ಸಬಲೀಕರಣ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದು ಕಾಣಬಹುದಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡರೂ ತಮ್ಮ ಸರಳ ಹಾಗೂ ನಿಸ್ವಾರ್ಥವಾದ ಸೇವೆಯಿಂದ ಪ್ರಸಿದ್ಧರಾಗಿದ್ದಾರೆ. ಇವರ ಬದುಕು ಮತ್ತು ಸಾಹಿತ್ಯಿಕ ಅಧ್ಯಯನ ಇಂದಿನ ಪೀಳಿಗೆಯವರಿಗೆ ಅತ್ಯಗತ್ಯವಾಗಿದೆ.

## 4. ಸಂಶೋಧನಾ ವಿಧಾನ:

ಸಂಶೋಧಸಂಶೋಧನಾ ವಿಧಾನವು ಗ್ರಂಥಾಲಯ ಮತ್ತು ಕ್ಷೇತ್ರಕಾರ್ಯ ಎರಡು ವಿಧಾನವನ್ನು ಒಳಗೊಂಡಿದೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋಗಿ ಸಂಶೋಧನೆಗೆ ಸಂಬಂಧಿಸಿದ ಮಾಹಿತಿಗಳನ್ನು, ಕೃತಿಗಳನ್ನು ಸಂಗ್ರಹಿಸುವುದು ಮತ್ತು ಸಂಬಂಧಿಸಿದ ವ್ಯಕ್ತಿಗಳನ್ನು ಭೇಟಿಯಾಗುವುದು. ಕ್ಷೇತ್ರಕಾರ್ಯವು ತುಂಬಾ ಸಮಯ ತೆಗೆದುಕೊಳ್ಳುವ ಕೆಲಸ ಮತ್ತು ದುಬಾರಿಯಾದುದ್ದು ಆಗಿದೆ. ದಾಖಲೆಗಳನ್ನು ಉಳಿಸಲು ಮೊಬೈಲ್, ಕಂಪ್ಯೂಟರ್ ರಿಕಾರ್ಡ್ಸ್ ಹೊಂದಿರುವುದು ಅಗತ್ಯವಾಗಿದೆ. ಪಠ್ಯಗಳ ವಿಶ್ಲೇಷಣೆಯು ಬಹಳ ಮುಖ್ಯವಾಗಿದೆ. ಅವರ ಜೀವನ ಮತ್ತು ಕೃತಿಗಳಿಗೆ ಸಂಬಂಧಿಸಿದ ಇತರ ಪ್ರಮುಖ ವಸ್ತುಗಳನ್ನು ಸಂಗ್ರಹಿಸುವುದು ಅಗತ್ಯವಾಗಿದೆ. ಸುಧಾಮೂರ್ತಿಯವರ ಅಧ್ಯಯನವನ್ನು ಕೈಗೊಳ್ಳುವಲ್ಲಿ ಕ್ಷೇತ್ರಕಾರ್ಯ ಮತ್ತು ಗ್ರಂಥಾಲಯದ ಕೆಲಸಗಳೆರಡೂ ಪ್ರಮುಖವಾಗಿವೆ. ಸುಧಾಮೂರ್ತಿಯವರನ್ನು ಖುದ್ದಾಗಿ ಭೇಟಿಮಾಡಿ ಸಂದರ್ಶಿಸುವುದು ಸಹ ಅಗತ್ಯವಾಗಿದೆ.

**5. ಆಕರ ಸಾಮಗ್ರಿಗಳು:**

ಸುಧಾಮೂರ್ತಿಯವರು ರಚಿಸಿರುವ ಕೃತಿಗಳನ್ನು ಅಧ್ಯಯನ ಕೈಗೊಳ್ಳುವುದು ಮೂಲ ಆಕರ ಸಾಮಗ್ರಿಗಳಾಗಿವೆ. ಇವುಗಳ ನೆರವಿಲ್ಲದೆ ಸಂಶೋಧನಾಕಾರ್ಯ ಮುಂದಕ್ಕೆ ಸಾಗುವುದಿಲ್ಲ. ಅಧ್ಯಯನಕ್ಕೆ ಅನುಷಂಗೀಕ ಆಕರಗಳಾದ ವಿಮರ್ಶೆಗಳು, ಬರಹಗಳು, ವಿಮರ್ಶಾತ್ಮಕ ಟಿಪ್ಪಣಿಗಳು, ಪುಸ್ತಕಗಳು ಮತ್ತು ಸುದ್ಧಿ ಪತ್ರಿಕೆಗಳು, ಮಾಸಿಕ ಮತ್ತು ದ್ವಿ–ವಾರ್ಷಿಕ ನಿಯತ ಕಾಲಿಕಗಳು ಇತ್ಯಾದಿಗಳು. ಇವು ಅಧ್ಯಯನಕ್ಕೆ ಬಾಹ್ಯಸಾಕ್ಷ್ಯಗಳಾಗಿವೆ. ಆದ್ದರಿಂದ ಅಧ್ಯಯನದ ಮೂಲಗಳನ್ನು ಮುಂದುವರಿಸಲು ಆಂತರಿಕ ಮತ್ತು ಬಾಹ್ಯ ಸಾಕ್ಷ್ಯಗಳು ಅವಶ್ಯಕವಾಗಿವೆ.

**6. ಅಧ್ಯಯನದ ಪ್ರಸ್ತುತತೆ:**

ಪ್ರಸ್ತುತ ದಿನಮಾನದಲ್ಲಿ ಜನರಲ್ಲಿ ಸ್ವಾರ್ಥ ಹೆಚ್ಚಾಗಿ ಮನೋಭಾವಗಳು ಸಂಕುಚಿತವಾಗುತ್ತಿರುವ ಜನರಲ್ಲಿ ಸುಧಾಮೂರ್ತಿಯವರ ವಿಶಾಲಮನೋಭಾವ, ಸರಳ, ಸಜ್ಜನಿಕೆಯ ಮೂಲಕ ಸಮಾಜದ ಪ್ರಗತಿಗೆ ಶ್ರಮಿಸುತ್ತಿರುವ ಇವರ ಕಾರ್ಯಗಳು ಪ್ರಶಂಸನೀಯವಾಗಿದ್ದು, ಇವರ ವಿಚಾರಧಾರೆಗಳು ಇಂದಿನ ಪೀಳಿಗೆಯವರಿಗೆ ಅತಿ ಅಗತ್ಯವಾಗಿದ್ದು ನಮ್ಮ ಜೀವನವನ್ನು ಸುಂದರ, ಸರಳಗೊಳಿಸಿಕೊಳ್ಳಲು ಮಹತ್ವದ ವಿಚಾರವಾಗಿದೆ. ಆದ್ದರಿಂದ ಸುಧಾಮೂರ್ತಿಯವರ ಬದುಕು ಮತ್ತು ಸಾಹಿತ್ಯಿಕ ಅಧ್ಯಯನ ಕೈಗೊಳ್ಳುವುದು ಪ್ರಸ್ತುತವಾಗಿದೆ.

**7. ಸಂಶೋಧನೆಯ ಪ್ರಯೋಜನಗಳು:**

ಯಾವುದೇ ಕಾಲದ ಕವಿಯಾಗಲಿ, ಸಾಹಿತ್ಯ ಸೃಷ್ಟಿಯಾಗಲೀ ಕಾರ್ಯಕಾರಣವಿಲ್ಲದೆ ಸಂಭವಿಸದು. ಎಲ್ಲದಕ್ಕೂ ಒಂದು ಕಾರ್ಯ–ಕಾರಣ, ಪ್ರಯೋಜನ ಇದ್ದೇ ಇರುತ್ತದೆ.ಇದಕ್ಕೆ ಸುಧಾಮೂರ್ತಿಯವರ ಸಾಹಿತ್ಯವೂ ಹೊರತಾಗಿಲ್ಲ. ನಾಡು, ನುಡಿ, ಸಂಸ್ಕೃತಿ, ಬದುಕಿನ ಲಯವನ್ನು ಭಾಷೆಯ ಮೂಲಕ ಸಮರ್ಪಕವಾಗಿ ಹಿಡಿಯುವ ಶಕ್ತಿ ಸುಧಾಮೂರ್ತಿಯವರಿಗೆ ಒಗ್ಗಿದೆ. ಅವರು ಒಬ್ಬ ಇಂಜಿನೀಯರ್ ವಿದ್ಯಾರ್ಥಿಯಾಗಿದ್ದರು ಸಾಹಿತ್ಯದ ಮತ್ತು ಸಮಾಜದ ಕುರಿತು ಹೊಂದಿರುವ ಕಳಕಳಿಯು ಇವರ ಸಾಹಿತ್ಯೀಕ ಅಧ್ಯಯನದ ಮೂಲಕ ತಿಳಿಯಬಹುದು. ಮತ್ತು ಇವರು ಸಮಾಜಕ್ಕೆ ಸಲ್ಲಿಸುತ್ತಿರುವ ಸಮಗ್ರ ಸೇವೆಯನ್ನು ಅರಿಯುವ ಮೂಲಕ ನಮ್ಮ ಬದುಕು ಸಾರ್ಥಕಗೊಳಿಸಿಕೊಳ್ಳುವ ವಿಧಾನವನ್ನು ತಿಳಿಯಬಹುದಾಗಿದೆ. ಆದ್ದರಿಂದ ಈ ಅಧ್ಯಯನವು ಮಹತ್ವದ ಪ್ರಯೋಜನವನ್ನು ಹೊಂದಿದೆ.

**8. ಸಮಾರೋಪ:**

ಸುಧಾಮೂರ್ತಿಯವರು ಭಾರತೀಯ ಶಿಕ್ಷಣ ತಜ್ಞೆ, ಲೇಖಕಿ ಮತ್ತು ಲೋಕೋಪಕಾರಿ ಅವರು ಇನ್ಫೋಸಿಸ್ ಫೌಂಡೇಶನ್‌ನ ಅಧ್ಯಕ್ಷರಾಗಿದ್ದು ಸಾರ್ವಜನಿಕ ಚಾರಿಟೇಬಲ್ ಟ್ರಸ್ಟನ್ನು ಸ್ಥಾಪಿಸಿದ್ದಾರೆ. ಈ ಟ್ರಸ್ಟ್ ಮೂಲಕ ಪ್ರವಾಹಪೀಡಿತ ಪ್ರದೇಶಗಳಲ್ಲಿ 2300 ಮನೆಗಳನ್ನು ನಿರ್ಮಿಸಿದ್ದಾರೆ. ಅವರು ಪ್ರತಿ ಶಾಲೆಗೆ ಒಂದು ಗ್ರಂಥಾಲಯ ಇರಬೇಕೆಂದು ಇಲ್ಲಿಯವರೆಗೆ 70000 ಗ್ರಂಥಾಲಯಗಳನ್ನು ನಿರ್ಮಿಸಿದ್ದಾರೆ. ಮತ್ತು ಇವರ ಸಂಸ್ಥೆ ಇದುವರೆಗೆ 16000 ಸಾರ್ವಜನಿಕ ಶೌಚಾಲಯಗಳನ್ನು

ನಿರ್ಮಿಸಿದೆ. ಇವರು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ನನ್ನ ಮುಖ್ಯಗುರಿ ಸುಧಾಮೂರ್ತಿಯವರ ಕನ್ನಡ ಸಾಹಿತ್ಯ ಅಧ್ಯಯನ ಮಾಡುವುದಾಗಿದೆ. ಇವರಿಗೆ ಪದ್ಮಶ್ರೀ, ದಾನಚಿಂತಾಮಣಿ, ಅತ್ತಿಮಬ್ಬೆ ಮತ್ತು ಇತರ ಅನೇಕ ಪ್ರಶಸ್ತಿಗಳು ದೊರಕಿವೆ. ಇವರ ಬದುಕು, ಬರಹಗಳ ಕುರಿತು ಅಧ್ಯಯನ ಮಾಡುವ ಮೂಲಕ ಅವರ ಸರಳ ಜೀವನ, ಭಾಷಣಗಳು ಸಾಮಾಜಿಕ ಕಾರ್ಯಗಳು ಯುವ ಪೀಳಿಗೆಗೆ ಮಾದರಿಯಾಗಿವೆ. ಭಾರತದ ಶ್ರೀಮಂತ ವ್ಯಕ್ತಿಗಳ ಪಟ್ಟಿಯಲ್ಲಿ ಅವರ ಹೆಸರಿದ್ದರೂ ಅವರ ಸರಳತೆಯ ಮೂಲಕ ಪ್ರಭಾವ ಬೀರಿದ್ದೂ ಪ್ರಸಿದ್ಧರಾಗಿದ್ದು ಮಹತ್ವದ ವಿಚಾರವಾಗಿದೆ. ಹೀಗಾಗಿ ಇವರ ಕುರಿತು ಅಧ್ಯಯನ ಕೈಗೊಳ್ಳುವುದು ಅವಶ್ಯಕವಾಗಿದೆ.